ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—
(ಅ) ಬಂದಿದೆ.
(ಆ) ರಿಪೇರಿ ಕೆಲಸಗಳನ್ನು ಹಂತ ಹಂತವಾಗಿ ತೆಗೆದುಕೊಂಡು, ನೀರನ್ನು ಒದಗಿಸಲಾಗುವುದು.

ಮಾನ್ವಿ ತಾಲ್ಲೂಕಿನ ರಸ್ತೆಗಳ ದುರಂತ

೭೦೮. ಶ್ರೀ ಬಸವರಾಜ ಪಾಟೀಲ್ (ಮಾನ್ವಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾನ್ವಿ ತಾಲ್ಲೂಕಿನ ರಸ್ತೆಗಳ ವಿಸ್ತೀರ್ಣ ಎಷ್ಟು?

ಆ) ಪೋತಡಾಳದಿಂದ ಬನ್ನಾನಪುರ, ಹಿರೇಹಣಗಿಯಿಂದ ಹಿರೇಕೊಟ್ನೇಕಲ್, ಪೋತನಾಳದಿಂದ ಬೀಕಲಪರವಿಗೆ ಇರುವ ರಸ್ತೆಗಳು ಯಾವ ವರ್ಷದಲ್ಲಿ ನಿರ್ಮಾಣಗೊಂಡವು?

ಇ) ಸದರಿ ರಸ್ತೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ!

ಈ) ಹಾಗಿದ್ದಲ್ಲಿ, ಸದರಿ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ತುಂಗಭದ್ರಾ ಆಣೆಕಟ್ಟು ರಸ್ತೆಗಳ ಉದ್ದ ೨೭೪ ಕಿ.ಮೀ.

ಆ) (೧) ಪೋತನಾಳದಿಂದ—ಬನ್ನಾಪುರ ರಸ್ತೆ ೧೯೭೬–೭೭ರಲ್ಲಿ,
(೨)ಹಿರೇಹಣಗಿಯಿಂದ—ಹಿರೇಕೊಟ್ನೇಕಲ್ ರಸ್ತೆ ೧೯೭೫–೭೬ರಲ್ಲಿ ಹಾಗೂ
(೩) ಪೋತನಾಳದಿಂದ – ಜೀಕಲ್‌ಪರವಿಗೆ ರಸ್ತೆ ೧೯೭೯–೮೦ರಲ್ಲಿ, ನಿರ್ಮಾಣಗೊಂಡವು. ಮೂರು ರಸ್ತೆಗಳಲ್ಲೂ ಹಳ್ಳಗಳಿಗೆ ಸೇತುವೆ ಕಾರ್ಯಗಳಾಗಬೇಕಾಗಿದೆ.

ಇ) ಬಂದಿದೆ.

ಈ) ೧೯೮೭–೮೮ ಬಜೆಟ್ ಹೆಡ್‌ನಲ್ಲಿ ೧೯೮೫–೮೬ನಲ್ಲಿ, ಅನುದಾನ ನೀಡಿದ ಪೊಬಲಗಿಗೆ ಅನುಗುಣವಾಗಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿರುವುದು ಹಾಗೂ ಕಾಡಾ ಮಾಸ್ಟರ್ ಯೋಜನೆ ಪ್ರಕಾರ ಹಣದ ಸೌಲಭ್ಯತೆಗನುಸಾರ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಜಮಖಂಡಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳು

೭೫೩. ಶ್ರೀ ಬಾಬುರೆಡ್ಡಿ ಎಂ. ಮಂಗಳೆ (ಬೀಳಗಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕಿನ ಬಿದಿರಿ, ಕಂಬಿಚನೂರು, ಹಿರೇಪಡಸಲಗಿ, ಹಾಗೂ ಕಡಕೋಳಗಳಲ್ಲಿ ನೀರಾವರಿ ಯೋಜನೆ ಜಾರಿಯಲ್ಲಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿರುವ ನೀರಾವರಿ ಕ್ಷೇತ್ರವನ್ನು ವಿಸ್ತರಿಸುವ ಆಲೋಚನೆ ಇದೆಯೇ ?

ಇ) ಹಾಗಿದ್ದಲ್ಲಿ ಈ ದಿಶೆಯಲ್ಲಿ ವಿವರವಾದ ಸಮೀಕ್ಷೆ ನಡೆಸಲಾಗುವುದೇ

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ಹೌದು

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.